ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 944
ಮಾನ್ಯ ಸದಸ್ಯರ ಹೆಸರು	: ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	: 20.09.2021
ಉತ್ತರಿಸುವ ಸಚಿವರು	: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ 2020-21ನೇ ಸಾಲಿನಲ್ಲಿ ಕೋವಿಡ್-19 ನಿರ್ವಹಣೆಗೆ ಬಿಡುಗಡೆಯಾದ ಅನುದಾನದ ಮೊತ್ತವೆಷ್ಟು;	ಕೋವಿಡ್-19ರ 1 ಮತ್ತು 2ನೇ ಅಲೆಯನ್ನು ತಡೆಗಟ್ಟಲು 2020-21ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ಘಟಕದಿಂದ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. ಧಾರವಾಡ ಮತ್ತು ಹಾವೇರಿ ಜಿಲ್ಲಾ ಆಸ್ಪತ್ರೆಗಳಲ್ಲಿ ಮೆಡಿಕಲ್ ಆಕ್ಸಿಜನ್ ಗ್ಯಾಸ್ ಪೈಪ್ ಲೈನ್ ಅಳವಡಿಸುವ ಕಾಮಗಾರಿಗಳನ್ನು ರಾಜ್ಯವಿಪತ್ತು ನಿರ್ವಹಣೆ ಅಡಿಯಲ್ಲಿ ತಲಾ ರೂ.160.00 ಲಕ್ಷಗಳ ಅಂದಾಜು ಮೊತ್ತದಲ್ಲಿ (ಒಟ್ಟಾರೆ ರೂ.320.00 ಲಕ್ಷಗಳು) ಪೂರ್ಣಗೊಳಿಸಿ ಹಸ್ತಾಂತರಿಸಲಾಗಿರುತ್ತದೆ. ಧಾರವಾಡ ಜಿಲ್ಲೆಯ 3, ಗದಗ ಜಿಲ್ಲೆಯ 4 ಹಾಗೂ ಹಾವೇರಿ ಜಿಲ್ಲೆಯ 6, ಒಟ್ಟಾರೆ 13 ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಮೆಡಿಕಲ್ ಆಕ್ಸಿಜನ್ ಗ್ಯಾಸ್ ಪೈಪ್ ಲೈನ್ ಅಳವಡಿಸುವ ಕಾಮಗಾರಿಗಳನ್ನು ರಾಜ್ಯವಿಪತ್ತು ನಿರ್ವಹಣೆ ಅಡಿಯಲ್ಲಿ ತಲಾ ರೂ.55.00 ಲಕ್ಷಗಳ ಅಂದಾಜು ಮೊತ್ತದಲ್ಲಿ (ಒಟ್ಟಾರೆ ರೂ.715.00 ಲಕ್ಷಗಳು) ಪೂರ್ಣಗೊಳಿಸಿ ಹಸ್ತಾಂತರಿಸಲಾಗಿರುತ್ತದೆ. ಗದಗ ಜಿಲ್ಲೆಯ 1 ಹಾಗೂ ಹಾವೇರಿ ಜಿಲ್ಲೆಯ 6 ಒಟ್ಟಾರೆ 7 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಮೆಡಿಕಲ್ ಆಕ್ಸಿಜನ್ ಗ್ಯಾಸ್ ಪೈಪ್ ಲೈನ್ ಅಳವಡಿಸುವ ಕಾಮಗಾರಿಗಳನ್ನು ರಾಜ್ಯ ವಿಪತ್ತು ನಿರ್ವಹಣೆ ಅಡಿಯಲ್ಲಿ ತಲಾ ರೂ.48.00 ಲಕ್ಷಗಳ ಅಂದಾಜು ಮೊತ್ತದಲ್ಲಿ (ಒಟ್ಟಾರೆ ರೂ.336.00 ಲಕ್ಷಗಳು) ಪೂರ್ಣಗೊಳಿಸಿ ಹಸ್ತಾಂತರಿಸಲಾಗಿರುತ್ತದೆ. ಒಟ್ಟಾರೆಯಾಗಿ ಧಾರವಾಡ ಜಿಲ್ಲೆಗೆ ರೂ.325.00 ಲಕ್ಷಗಳು, ಗದಗ ಜಿಲ್ಲೆಗೆ ರೂ.268.00 ಲಕ್ಷಗಳು ಮತ್ತು ಹಾವೇರಿ ಜಿಲ್ಲೆಗೆ ರೂ.778.00 ಲಕ್ಷಗಳು ಅನುದಾನ ಬಿಡಗಡೆ ಮಾಡಲಾಗಿರುತ್ತದೆ. ಮೇಲಿನ ಅನುದಾನದ ಜೊತೆಗೆ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ 2020-21ನೇ ಸಾಲಿನಲ್ಲಿ ಕೋವಿಡ್-19 ನಿರ್ವಹಣೆಗೆ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡ ಪಟ್ಟಿಯಲ್ಲಿ ಸಲ್ಲಿಸಿದೆ. (ರೂ. ಗಳಲ್ಲಿ)

ಕ್ರಸಂ	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಮತ್ತು ಜಿಲ್ಲಾ ಶಸ್ತ್ರ ಚಿಕಿತ್ಸಕರ ಕಛೇರಿಯ ವಿವರ	ಕೋವಿಡ್-19ರ ನಿಯಂತ್ರಣಕ್ಕೆ ಬಿಡುಗಡೆಯಾದ ಅನುದಾನದ ವಿವರ
1	ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳ ಕಛೇರಿ ಧಾರವಾಡ	4,85,18,668/-
2	ಜಿಲ್ಲಾ ಆಸ್ಪತ್ರೆ, ಧಾರವಾಡ	65,90,000/-
3	ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳ ಕಛೇರಿ ಗದಗ	70,00,000/-
4	ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳ ಕಛೇರಿ, ಹಾವೇರಿ	3,39,18,486/-
5	ಜಿಲ್ಲಾ ಆಸ್ಪತ್ರೆ, ಹಾವೇರಿ	7,73,95,217/-

ಆ	ಸದರಿ ಜಿಲ್ಲೆಗಳಲ್ಲಿ ಈ ರೀತಿ ಬಿಡುಗಡೆಯಾದಂತಹ ಅನುದಾನವನ್ನು ಯಾವ ಮಾನದಂಡದಲ್ಲಿ ವ್ಯಯ ಮಾಡಲಾಗಿರುತ್ತದೆ	ಎಲ್ಲಾ ಕಾಮಗಾರಿಗಳಿಗೆ ನಿಯಮಾನುಸಾರ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಿ, ಕಾಮಗಾರಿಗಳನ್ನು ಗುತ್ತಿಗೆದಾರರು ತೃಪ್ತಿಕರವಾಗಿ ಪೂರ್ಣಗೊಳಿಸಿದ ನಂತರ ಗುತ್ತಿಗೆದಾರರ ಬಿಲ್ಲುಗಳನ್ನು ನಿಯಮಾನುಸಾರ ಪಾವತಿಸಲಾಗಿದೆ. ಸದರಿ ಜಿಲ್ಲೆಗಳಲ್ಲಿ ಬಿಡುಗಡೆಯಾದ ಅನುದಾನವನ್ನು ಈ ಕೆಳಕಂಡ ಮಾನದಂಡದಲ್ಲಿ ವ್ಯಯ ಮಾಡಲಾಗಿರುತ್ತದೆ.

ಕ್ರ.ಸಂ	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಮತ್ತು ಜಿಲ್ಲಾ ಶಸ್ತ್ರ ಚಿಕಿತ್ಸಕರ ಕಛೇರಿಯ ವಿವರ	ಕೋವಿಡ್-19ರ ಅನುದಾನವನ್ನು ವೆಚ್ಚ ಮಾಡಿದ ಮಾನದಂಡ
1	ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳ ಕಛೇರಿ ಧಾರವಾಡ	2021-21ನೇ ಸಾಲಿನಲ್ಲಿ ಕೋವಿಡ್-19ರ ನಿಯಂತ್ರಣಕ್ಕೆ ಮತ್ತು ಕೊವಿಡ್-19 ಅನುದಾನ ಬಿಡುಗಡೆಯಾದ ಮೊತ್ತ ರೂ.4,85,18,668/- ಇದಲ್ಲಿ ಒಟ್ಟು ಖರ್ಚಾದ ಮೊತ್ತ ರೂ.4,03,66,163/- ಕೋವಿಡ್ ನಿಯಂತ್ರಣ ಮಾಡಲು ಗುತ್ತಿಗೆ ಸಿಬ್ಬಂದಿಗಳಿಗೆ ಮಾಸಿಕ ಸಂಭಾವನೆ ಹಾಗೂ ನಿಯಂತ್ರಣ ಚಟುವಟಿಕೆಯಲ್ಲಿ ಭಾಗವಹಿಸಿದ ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹಧನ ಪಾವತಿಸಲು, ವರದಿ ತಯಾರಿಕಗೆ ಅಗತ್ಯವಿರುವ ಕಛೇರಿ ಉಪಕರಣಗಳು ಮತ್ತು ಸ್ಟೇಷನರಿ ಖರೀದಿಗೆ, ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕೋವಿಡ್-19 ಐ.ಇ.ಸಿ ಚಟುವಟಿಕೆಗೆ ಅಗತ್ಯವಿರುವ ಪೋಸ್ಟರ್ಸ್, ಹೋಲ್ಡಿಂಗ್ಸ್, ಮತ್ತು ಕರಪತ್ರ ಮುದ್ರಿಸುವ ಸಲುವಾಗಿ ಬಳಕೆ ಸಾಮಾಗ್ರಿಗಳು ಮತ್ತು ಔಷಧಿಗಳ ಖರೀದಿಗೆ, ತರಬೇತಿ ವೆಚ್ಚದ ಸಲುವಾಗಿ, ಎನ್. ಹೆಚ್. ಎಂ ಗುತ್ತಿಗೆ ನೌಕರರ ರಿಸ್ಕ್ ಅಲೋಯನ್ಸ್ ಪಾವತಿಸಲು ನಿಯಮಾನುಸಾರ ಅನುಮೋದನೆ ಮೇರೆಗೆ ಬಳಕೆ ಮಾಡಲಾಗಿದೆ.
2	ಜಿಲ್ಲಾ ಆಸ್ಪತ್ರೆ, ಧಾರವಾಡ	ಸರ್ಕಾರದ ನಿಯಮಾವಳಿಯಂತೆ ಖರ್ಚು ಮಾಡಲಾಗಿದೆ.
3	ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳ ಕಛೇರಿ ಗದಗ	ಎನ್. ಹೆಚ್. ಎಂ ಮಾರ್ಗಸೂಚಿ ಪ್ರಕಾರ ರೂ.26.30 ಲಕ್ಷಗಳನ್ನು ಖರ್ಚು ಮಾಡಲಾಗಿರುತ್ತದೆ.

		4	ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳ ಕಛೇರಿ, ಹಾವೇರಿ	ಕೋವಿಡ್ ತುರ್ತು ಚಿಕಿತ್ಸೆಗೆ ಅವಶ್ಯವಿರುವ ಸಾಮಾಗ್ರಿಗಳನ್ನು ನಿಯಮಾನುಸಾರ 4(ಎ) ವಿನಾಯಿತಿ ಅಡಿಯಲ್ಲಿ ವ್ಯಯ ಮಾಡಲಾಗಿರುತ್ತದೆ..
		5	ಜಿಲ್ಲಾ ಆಸ್ಪತ್ರೆ, ಹಾವೇರಿ	ಕೋವಿಡ್-19ರ ನಿರ್ವಹಣೆಗಾಗಿ 2020-21ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾದಂತಹ ಎಸ್.ಡಿ.ಆರ್.ಎಫ್ ಅನುದಾನವನ್ನು ಖರೀದಿ ಸಮಿತಿಯ ಠರಾವಿನ ಮೇರೆಗೆ ಕೋವಿಡ್ -19 ನಿರ್ವಹಣೆಗಾಗಿ ಆಧ್ಯತೆಯ ಮೇರೆಗೆ ವ್ಯಯ ಮಾಡಲಾಗಿರುತ್ತದೆ.

ಇ	ಬಿಡುಗಡೆಯಾದಂತಹ ಅನುದಾನವನ್ನು ಸಮರ್ಪಕವಾಗಿ ಬಳಸಲು ವಿಫಲರಾದ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ?	ಕಾಮಗಾರಿಗೆ ಸಂಬಂಧಿಸಿದಂತೆ ಸದರಿ 3 ಜಿಲ್ಲೆಗಳಲ್ಲಿ ಬಿಡುಗಡೆಯಾದ ಒಟ್ಟಾರೆ ರೂ.1371.00 ಲಕ್ಷಗಳ (ಧಾರವಾಡ ರೂ.325.00 ಲಕ್ಷಗಳು, ಗದಗ ರೂ.268.00 ಲಕ್ಷಗಳು ಹಾಗೂ ಹಾವೇರಿ ರೂ.778.00 ಲಕ್ಷಗಳು) ಅನುದಾನವನ್ನು ಪೂರ್ಣಪ್ರಮಾಣದಲ್ಲಿ ವ್ಯಯ ಮಾಡಲಾಗಿರುತ್ತದೆ. ಬಿಡುಗಡೆಯಾದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆ.

ಆಕುಕ 111 ಎಸ್‌ಬಿವಿ 2021.

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು